ಯಕಗಳು ಹಾಗೂ ಇತರೇ ವಿಧೇಯಕಗಳನ್ನು ದಿನಾಂಕ 13ನೇ ಆಗಸ್ಟ್ ಹಾಗೂ 14ನೇ ಆಗಸ್ಟ್ 1996ರಂದು ತೆಗೆದುಕೊಳ್ಳಲಾಗುವುದು. ಈ ವರದಿಗೆ ಸದನವು ಒಪ್ಪಿಗೆ ನೀಡುತ್ತದೆಂದು ಭಾವಿಸುತ್ತೇನೆ. ಈಗ ಬೇಡಿಕೆಗಳ ಮೇಲಿನ ಉತ್ತರ.

## 6.20 ಪಿ.ಎಂ.

**ಶ್ರೀ ಜೆ.ಹೆಚ್. ಪಟೇಲ್:-** ಸದನದಲ್ಲಿ ನಡೆಯುವ ವಿಷಯಗಳು ರೆಕಾರ್ಡ್‌ಗೆ ಹೋಗಬೇಕಾಗುತ್ತದೆ.

**ಅಧ್ಯಕ್ಷರು:-** ಮಾನ್ಯ ಪುಟ್ಟಣ್ಣಯ್ಯನವರೇ, ಸ್ವಲ್ಪ ಯೋಚನೆ ಮಾಡಿ, ಸಭಾ ನಾಯಕರು ಮುಖ್ಯಮಂತ್ರಿಯಾದ ಮೇಲೆ ಮೊದಲನೆ ಬಾರಿಗೆ ಅವರಿಗೆ ಸಂಬಂಧಪಟ್ಟ ಬೇಡಿಕೆ ಮೇಲೆ ಉತ್ತರ ಕೊಡಲು ನಿಂತಿದ್ದಾರೆ. ಎಲ್ಲಾ ವಿಚಾರಗಳನ್ನು ಸಾಕಷ್ಟು ಸುದೀರ್ಘವಾಗಿ ಈ ಸದನದಲ್ಲಿ ಚರ್ಚೆ ಮಾಡುತ್ತಿದ್ದೇವೆ. ಕೆಲವು ವಿಚಾರಗಳಲ್ಲಿ ಅಭಿಪ್ರಾಯ ಭೇದ ಬರತಕ್ಕಂಥಾದ್ದು ಸಹಜ. ಅವರು ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ತಾವುಗಳು ಧರಣಿ ಮಾಡತಕ್ಕಂಥ ತೀವ್ರವಾದ ಸನ್ನಿವೇಶ ಏನೂ ಬಂದಿಲ್ಲ. ಸೌಜನ್ಯದ ದೃಷ್ಟಿಯಿಂದ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ದಯ ಮಾಡಿ ತಾವು ಸಹಕರಿಸಬೇಕು.

**ಶ್ರೀ ವಾಟಾಳ್ ನಾಗರಾಜ್:-** ಆಯಿತು, ನಾವು ಸಭಾತ್ಯಾಗ ಮಾಡುತ್ತೇವೆ.

(ಮಾನ್ಯ ವಾಟಾಳ್ ನಾಗರಾಜ್‌ರವರು, ಕೆ.ಸಿ.ಪಿ. ಪಕ್ಷದ ಸದಸ್ಯರುಗಳು, ಹಾಗೂ ಶ್ರೀ ಕೆ.ಎಸ್. ಪುಟ್ಟಣ್ಣಯ್ಯನವರು ಸಭಾತ್ಯಾಗ ಮಾಡಿದರು)

**ಅಧ್ಯಕ್ಷರು:-** ಮಾನ್ಯ ಸದಸ್ಯರುಗಳಾದ ಶ್ರೀ ಪ್ರತಾಪ ಚಂದ್ರ ಶೆಟ್ಟಿ ಮತ್ತು ರಮಾನಾಥ ರೈ ಅವರ ಒಂದು ಗಮನ ಸೆಳೆಯುವ ಸೂಚನೆ ನಿನ್ನೆ ದಿವಸವೇ ಕೈ ಬಿಟ್ಟು ಹೋಗಿತ್ತು. ಇವತ್ತು ಅದನ್ನು ಹಾಕಲಾಗಿದೆ. ಅದನ್ನು ಮುಗಿಸಿದ ಮೇಲೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಲಿ.

## 6. ಗಮನ ಸೆಳೆಯುವ ಸೂಚನೆಗಳು

**ವಿಷಯ:-** ಆಶ್ರಯ ಅಂಬೇಡ್ಕರ್ ಹಾಗೂ ನೆರಳಿನ ಭಾಗ್ಯ ಯೋಜನೆಗಳ ಫಲಾನುಭವಿಗಳ ಆಯ್ಕೆ.

**ಶ್ರೀ ಬಿ. ರಮಾನಾಥ ರೈ:-** ಮಾನ್ಯ ಅಧ್ಯಕ್ಷರೆ, ಆಶ್ರಯ, ಅಂಬೇಡ್ಕರ್, ನೆರಳಿನ ಭಾಗ್ಯ ಯೋಜನೆಗಳ ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ತಾಲ್ಲೂಕು ಪಂಚಾಯಿತಿ ಸಮಿತಿಗಳು ಸರ್ಕಾರದ ಮಾರ್ಗಸೂಚಿಯನ್ನು ಅನುಸರಿಸದಿರುವ ಬಗ್ಗೆ ಮಾನ್ಯ ವಸತಿ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ.ಎನ್. ಬಚ್ಚೇಗೌಡ (ವಸತಿ ಸಚಿವರ ಪರವಾಗಿ) (ನಗರಾಭಿವೃದ್ಧಿ ಸಚಿವರು):-

1) ಆಶ್ರಯ, ಅಂಬೇಡ್ಕರ್, ನೆರಳಿನ ಭಾಗ್ಯ ಯೋಜನೆಗಳ ಅಡಿಯಲ್ಲಿ ಫಲಾನುಭವಿಗಳ ಆಯ್ಕೆಯನ್ನು ಸರ್ಕಾರಿ ಆದೇಶ ಸಂಖ್ಯೆ : ಹೆಚ್‌ಯುಡಿ 1 ಹೆಚ್‌ಎಹೆಚ್ 95(4) ದಿನಾಂಕ 18-8-95ರ ಆದೇಶದಲ್ಲಿ ಸೂಚಿಸಿದ ಮಾರ್ಗಸೂಚಿಯಂತೆ ಆಯಾ ತಾಲ್ಲೂಕು ಪಂಚಾಯತ್‌ಗಳು ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ.

2) ರಾಜ್ಯ ಸರ್ಕಾರ ಮೇ 1995ರಂದು ರಾಜ್ಯಾದ್ಯಂತ ನಡೆಸಿದ ನಿವೇಶನ ರಹಿತರ, ವಸತಿರಹಿತರ ಸರ್ವೇಷಣೆಯಲ್ಲಿ ಗುರ್ತಿಸಲ್ಪಟ್ಟ ವ್ಯಕ್ತಿಗಳ ಪಟ್ಟಿಯನ್ನು ಗ್ರಾಮ ಪಂಚಾಯತ್‌ವಾರು, ತಾಲ್ಲೂಕುವಾರು ಆಯಾ ಗ್ರಾಮ ಪಂಚಾಯತ್ ತಾಲ್ಲೂಕು ಪಂಚಾಯತ್ ಕಛೇರಿಯಲ್ಲಿ ಲಭ್ಯವಿರುತ್ತದೆ. ಅದರಲ್ಲಿದ್ದ ಫಲಾನುಭವಿಗಳಿಗೆ ಮನೆ ನಿವೇಶನಗಳನ್ನು ನೀಡಲಾಗಿದೆ.

3) ಈ ರೀತಿ ಆಯ್ಕೆ ಮಾಡಲಾದ ಪಟ್ಟಿಯಲ್ಲಿ ಅನರ್ಹ ವ್ಯಕ್ತಿಗಳಿದ್ದರೆ ಅವರ ಹೆಸರನ್ನು ವಿಚಾರಣೆ ನಡೆಸಿ ತೆಗೆದುಹಾಕಲು ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ.

4) ಸರ್ಕಾರಿ ಆದೇಶ ಸಂಖ್ಯೆ : ಡಿಒಹೆಚ್ 39 ಹೆಚ್‌ಎಹೆಚ್ 96, ದಿನಾಂಕ 3-6-96ರಲ್ಲಿ ಆದೇಶಿಸಿರುವಂತೆ ಕರ್ನಾಟಕ ಪಂಚಾಯತ್ ರಾಜ್, ಪಂಚಾಯತ್ ರಾಜ್ಯ ಅಧಿನಿಯಮ 1993 ಕಲಂ 3(6ಬಿ) 58, 145 ಹಾಗೂ ಷೆಡ್ಯೂಲ್ 1 ಮತ್ತು 2 ರಲ್ಲಿ ನೀಡಿರುವ ಮಾರ್ಗಸೂಚಿಯಂತೆ ಗ್ರಾಮ ಪಂಚಾಯತಿಗಳು ಗ್ರಾಮ ಸಭೆಗಳನ್ನು ಕರೆದು, ಫಲಾನುಭವಿಗಳನ್ನು ಆಯ್ಕೆ ಮಾಡಲು ಸರ್ಕಾರ ಸ್ಪಷ್ಟ ನಿರ್ದೇಶನಗಳನ್ನು ನೀಡಲಾಗಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಹ ಆಗಸ್ಟ್ 31ರೊಳಗೆ ಫಲಾನುಭವಿಗಳನ್ನು ಗ್ರಾಮಸಭೆಯಲ್ಲಿ ಆಯ್ಕೆ ಮಾಡಲು ಸ್ಪಷ್ಟ ಆದೇಶ ಸಂಖ್ಯೆ: ಆರ್‌ಡಿಪಿ 80 ಜೆಆರ್‌ವೈ 96ನ್ನು ದಿನಾಂಕ 19-7-96ರಂದು ಹೊರಡಿಸಲಾಗಿದೆ. ಅದರ ಸಾರಾಂಶ ಕೆಳಕಂಡಂತೆ ಇದೆ.

   (ಅ) ಹಿಂದಿನ ಸಾಲಿನಲ್ಲಿ ಅಪೂರ್ಣಗೊಂಡ ಮನೆಗಳನ್ನು ಆದ್ಯತೆ ಮೇಲೆ ಪೂರ್ಣಗೊಳಿಸುತ್ತೇವೆ.

   (ಆ) ಇಂದಿರಾ ಆವಾಸ್, ಆಶ್ರಯ, ಅಂಬೇಡ್ಕರ್ ಯೋಜನೆಗಳ ಅಡಿ ಮನೆಗಳ ಗುರಿ ಹೆಚ್ಚಳ ಸಂಭವವಿರುವುದರಿಂದ, 1996-97ರ ಇಂದಿರಾ ಆವಾಸ್ ಮನೆಗಳ ಗುರಿಗೆ ಅರ್ಹ ಫಲಾನುಭವಿಗಳನ್ನು ಗ್ರಾಮಸಭೆಯಲ್ಲಿ ಗುರ್ತಿಸಿ 'ಎ' ಪಟ್ಟಿಯಲ್ಲಿ ಸಿದ್ಧಪಡಿಸಬೇಕು. ಇದೇ ಸಾಲಿನಲ್ಲಿ ಗುರಿ ಹೆಚ್ಚಳದ ಸಾಧ್ಯತೆ ಇರುವುದರಿಂದ ಮೊದಲ

ಪಟ್ಟಿಯ (ಎ ಪಟ್ಟಿ) ಆರಿಸಲಾದ ಸಂಖ್ಯೆಯ ಶೇಕಡಾ 50ರಷ್ಟು ಫಲಾನುಭವಿಗಳನ್ನು 'ಬಿ' ಪಟ್ಟಿಯಲ್ಲಿ ಆಯ್ಕೆ ಮಾಡಿ ಗುರ್ತಿಸಿ ಸಿದ್ಧಪಡಿಸಿಕೊಳ್ಳಬೇಕು. ಆಶ್ರಯ ಯೋಜನೆಯಲ್ಲಿ 'ಎ' ಮತ್ತು 'ಬಿ' ಪಟ್ಟಿಯನ್ನು ಸಮನಾದ ಸಂಖ್ಯೆಯಲ್ಲಿ ಫಲಾನುಭವಿಗಳ ಹೆಸರನ್ನು ಗ್ರಾಮಸಭೆಯಲ್ಲಿ ಗುರ್ತಿಸಿದಂತೆ ಪಟ್ಟಿ ಮಾಡಬೇಕು. ಅಂಬೇಡ್ಕರ್ ಯೋಜನೆಯಲ್ಲಿ ಎರಡನೇ ಆದ್ಯತೆ ಪಟ್ಟಿ ತಯಾರಿಸಬೇಕಾಗಿಲ್ಲ.

(ಇ) ಈಗಾಗಲೇ ಬಿಡುಗಡೆ ಮಾಡಿರುವ ಹಣ : ಸಧ್ಯದಲ್ಲಿ ಬಿಡುಗಡೆ ಮಾಡುವ ಹಣದಲ್ಲಿ 'ಎ' ಪಟ್ಟಿ : ಮೊದಲ ಆದ್ಯತೆ ಪಟ್ಟಿಯ ಫಲಾನುಭವಿಗಳಿಗೆ ಮನೆ ನಿರ್ಮಾಣ ಮಾಡಬೇಕು. 'ಬಿ' ಪಟ್ಟಿಯ ಫಲಾನುಭವಿಗಳಿಗೆ ಹೆಚ್ಚುವರಿ ಹಣ ಗುರಿ ಸಿದ್ಧವಾದ ಮೇಲೆ ಪ್ರತ್ಯೇಕ ನಿರ್ದೇಶನ ಸರ್ಕಾರ ನೀಡುತ್ತದೆ. ಒಂದು ವೇಳೆ ಅನುದಾನ ಲಭ್ಯವಿಲ್ಲವಾದಲ್ಲಿ 1997-98ರ ಸಾಲಿನಲ್ಲಿ ಮೊದಲ ಆದ್ಯತೆ ಪಟ್ಟಿಯನ್ನು ಪರಿಗಣಿಸಲು ಕ್ರಮವಹಿಸಲು ತಿಳಿಸಿದೆ.

(ಈ) ಸಮರ್ಪಕವಾಗಿ ಗ್ರಾಮಸಭೆ ನಡೆಸಿದ್ದಕ್ಕೆ ದಾಖಲೆಯಾಗಿ ಫೋಟೋಗಳನ್ನು ತೆಗೆದು ಗ್ರಾಮ ಪಂಚಾಯಿತಿ : ತಾಲ್ಲೂಕು ಪಂಚಾಯಿತಿಯಲ್ಲಿ ಇಡಲು ತಿಳಿಸಿದೆ.

+ **ಶ್ರೀ ಬಿ. ರಮಾನಾಥ ರೈ:-** ಮಾನ್ಯ ಅಧ್ಯಕ್ಷರೆ, ಪಂಚಾಯತ್ ರಾಜ್ ಆಡಳಿತ ವ್ಯವಸ್ಥೆಯಲ್ಲಿ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಮತ್ತು ಗ್ರಾಮ ಪಂಚಾಯತ್ ಎಂದು ಮೂರು ಹಂತದ ಆಡಳಿತ ವ್ಯವಸ್ಥೆ ಇದೆ. ಈ ಪಂಚಾಯತಿಗಳ ಮಧ್ಯ ಹೊಂದಾಣಿಕೆ ಕೊರತೆಯಿಂದಾಗಿ ಕೆಲವು ಸಮಸ್ಯೆಗಳು ಉಂಟಾಗಿ ಜನರಿಗೆ ತೊಡಕುಂಟಾಗುತ್ತಿದೆ. ಈಗ ನಾನು ಮುಖ್ಯವಾದ ವಿಷಯವನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುವುದಾದರೆ, 'ಆಶ್ರಯ, ನೆರಳಿನ ಭಾಗ್ಯ ಮತ್ತು ಅಂಬೇಡ್ಕರ್' ಯೋಜನೆಗಳಿಂದ ಬಡವರಿಗೆ ನಿವೇಶನಗಳನ್ನು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಗುರುತಿಸಿ ಆ ಪಟ್ಟಿಯನ್ನು ತಾಲ್ಲೂಕು ಪಂಚಾಯಿತಿಗೆ ಕಳುಹಿಸಿ ಒಪ್ಪಿಗೆ ಪಡೆಯುತಕ್ಕಂಥ ಪ್ರಕ್ರಿಯೆ ಇದೆ ಎಂದು ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ತಿಳಿಸಿದ್ದಾರೆ. ಆದರೆ, ನಾನು ಕಂಡ ಹಾಗೆ ನಮ್ಮ ಮಂಗಳೂರು ತಾಲ್ಲೂಕಿನಲ್ಲಿ ಗ್ರಾಮ ಪಂಚಾಯತಿಯವರು ಫಲಾನುಭವಿಗಳನ್ನು ಗುರುತಿಸಿ ಕಳುಹಿಸಿದ ಪಟ್ಟಿಯನ್ನು ತಾಲ್ಲೂಕು ಪಂಚಾಯತಿಯವರು ಕಸದ ಬುಟ್ಟಿಗೆ ಹಾಕಿ ಅವರೇ ಫಲಾನುಭವಿಗಳನ್ನು ಆಯ್ಕೆ ಮಾಡುವಂಥ ಕಾರ್ಯಪ್ರವೃತ್ತಿಯಾಗಿರುವುದನ್ನು ನಾವು ಕಾಣುತ್ತಿದ್ದೇವೆ. ಈ ವಿಷಯದ ಬಗ್ಗೆ ಸಂಬಂಧಪಟ್ಟವರ ಗಮನಕ್ಕೆ ತಂದರೂ ಕೂಡ ಇದನ್ನು ಸರಿಪಡಿಸತಕ್ಕಂಥ ಕಾರ್ಯವನ್ನು ಮಾಡುತ್ತಿಲ್ಲ. 'ನೆರಳಿನ ಭಾಗ್ಯ' ಯೋಜನೆಯಡಿ ಕೆಲವು ಫಲಾನುಭವಿಗಳಿಗೆ ಮನೆಗಳನ್ನು ಕೊಡಬೇಕೆಂದು ಶಾಸಕನಾಗಿ ನಾನು ಹೇಳಿದಾಗ, ತಾಲ್ಲೂಕು ಪಂಚಾಯಿತಿ ಸದಸ್ಯರುಗಳು ಒಬ್ಬೊಬ್ಬರು 6 ಮನೆಗಳನ್ನು ಹಂಚಿರುವುದರಿಂದ ನೀವು ತಿಳಿಸಿರುವವರಿಗೆ ಯಾವ ಮನೆಯನ್ನು ಕೊಡುವುದಕ್ಕಾಗುವುದಿಲ್ಲವೆಂದು ಹೇಳುತ್ತಿದ್ದಾರೆ. ನಮ್ಮ ಕ್ಷೇತ್ರದಲ್ಲಿ ಒಬ್ಬ ಬಡವನು ಮನೆ ಕೇಳಿಕೊಂಡು ಬಂದಾಗ ಅವನಿಗೆ

ಮನೆ ಕೊಡಿಸಲು ಶಾಸಕರಾದ ನಮಗೆ ಆಗುತ್ತಿಲ್ಲ. ಗ್ರಾಮ ಪಂಚಾಯತಿಯಲ್ಲಿ ಫಲಾನುಭವಿಗಳನ್ನು ಗುರುತಿಸಿ ಕಳುಹಿಸಿದ ಪಟ್ಟಿಗಾದರೂ ಮಾನ್ಯತೆ ಕೊಟ್ಟರೆ ಸರಿಹೋಗುತ್ತದೆ. ಇಲ್ಲವೆಂದರೆ ತೊಂದರೆಯಾಗುತ್ತದೆ. ತಾಲ್ಲೂಕು ಸಮಿತಿಯವರು ನೇರವಾಗಿ ಅವರೇ ಫಲಾನುಭವಿಗಳನ್ನು ಗುರುತಿಸುವುದರ ಮೂಲಕ ಸರ್ಕಾರದ ಮಾರ್ಗಸೂಚಿಯನ್ನು ಅನುಸರಿಸುತ್ತಿಲ್ಲವೆಂಬ ವಿಷಯವನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತಂದಿದ್ದೇನೆ. ಇದರ ಬಗ್ಗೆ ಸರಿಯಾದ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರ ನಿರ್ದೇಶನ ಕೊಡಬೇಕಾಗುತ್ತದೆ. ಗ್ರಾಮ ಪಂಚಾಯತಿಗಳು ಗುರುತಿಸಿ ಕಳುಹಿಸಿದ ಫಲಾನುಭವಿಗಳಿಗೆ ತಾಲ್ಲೂಕು ಪಂಚಾಯಿತಿಯವರು ನಿವೇಶನ ಕೊಡುವ ಬಗ್ಗೆ ಸೂಕ್ತವಾದ ಕ್ರಮಗಳನ್ನು ತೆಗೆದುಕೊಳ್ಳಬೇಕು. ಇಲ್ಲದೆ ಹೋದರೆ ಬಹಳ ತೊಂದರೆಯಾಗುತ್ತದೆಂದು ಮತ್ತೊಮ್ಮೆ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

**ಶ್ರೀ ಬಿ.ಎನ್. ಬಚ್ಚೇಗೌಡ :** ಮಾನ್ಯ ಅಧ್ಯಕ್ಷರೆ, ಈ ಹಿಂದೆ ನಿವೇಶನಗಳನ್ನು ಕೊಡುವ ಬಗ್ಗೆ ಫಲಾನುಭವಿಗಳನ್ನು ಗುರುತಿಸುವುದಕ್ಕಾಗಿ ಎಸ್.ಸಿ. ಎಸ್.ಟಿ. ಮತ್ತು ಬಿ.ಸಿ. ವರ್ಗಗಳ ರೆಪ್ರೆಸೆಂಟ್-ಟೀವ್‌ಗಳನ್ನು ಒಳಗೊಂಡಂತೆ ಶಾಸಕರ ಛೇರ್ಮನ್‌ಷಿಪ್‌ನಲ್ಲಿ ಒಂದು ಟಾಸ್ಕ್‌ಫೋರ್ಸ್ ಕಮಿಟಿಯನ್ನು ಮಾಡಲಾಗಿತ್ತು. ಬಡವರಿಗೆ ಮನೆಗಳನ್ನು ಮೂರು ಯೋಜನೆಗಳ ಮೂಲಕ ಕೊಡಲಾಗುತ್ತಿದೆ. 'ಆಶ್ರಯ ಅಂಬೇಡ್ಕರ್' ಯೋಜನೆಗಳು ಪೂರ್ತಿ ರಾಜ್ಯ ಸರ್ಕಾರದ ಯೋಜನೆಯಾಗಿದೆ. 'ಇಂದಿರಾ ಆವಾಸ್' ಯೋಜನೆಯಲ್ಲಿ ಕೇಂದ್ರ ಸರ್ಕಾರದ 80 ಪರ್ಸೆಂಟ್ ಹಣ ಮತ್ತು ರಾಜ್ಯದ ಸರ್ಕಾರದ 20 ಪರ್ಸೆಂಟ್ ಹಣ ಉಪಯೋಗಿಸಿ ಮನೆಗಳನ್ನು ಕೊಡಲಾಗುತ್ತಿದೆ. ಹಿಂದಿನ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ದೇವೇಗೌಡರು ನಿವೇಶನ ರಹಿತರನ್ನು ಗುರುತಿಸಲಿಕ್ಕಾಗಿ ಒಂದು ಸಮೀಕ್ಷೆಯನ್ನು ಮಾಡಿಸಿದ್ದರು. ಆದರಂತೆ 8 ಲಕ್ಷ ಜನ ನಿವೇಶನ ರಹಿತರಾಗಿದ್ದು, 11 ಲಕ್ಷ ಜನರಿಗೆ ನಿವೇಶನವಿದ್ದು ಮನೆಗಳು ಇಲ್ಲದಂಥವರಾಗಿದ್ದಾರೆ. ಈ ನಿವೇಶನ ರಹಿತರಿಗೆ ಮನೆಗಳನ್ನು ಲಾಟರಿ ಮೂಲಕ ಕೊಡುವಂಥ ಯೋಜನೆ ಮಾಡಲಾಗಿದ್ದು ಅದರಲ್ಲಿ ಸಾಕಷ್ಟು ವಿವಾದವಾದುದರಿಂದ ಅದನ್ನು ಕೈಬಿಡಲಾಯಿತು. ಮೊದಲಿದ್ದ ಹಾಗೆ ಶಾಸಕರ ಅಧ್ಯಕ್ಷತೆಯಲ್ಲೇ ಫಲಾನುಭವಿಗಳನ್ನು ಗುರುತಿಸತಕ್ಕಂಥ ಕಮಿಟಿಯನ್ನು ಮಾಡಬೇಕೆಂದು ಈ ಕಡೆಯ ಮತ್ತು ಆ ಕಡೆಯ ಶಾಸಕರುಗಳು ಒತ್ತಾಯ ಮಾಡುತ್ತಿದ್ದಾರೆ. ಈ ಮಧ್ಯ ನಮ್ಮ ಆರ್‌ಡಿಪಿಆರ್ ನಿಂದ ಒಂದು ಸುತ್ತೋಲೆಯು ಬಂದು ತಮಗೆ ಗೊತ್ತಿರುವ ಹಾಗೆ ಈಗಾಗಲೇ ತಿಳಿಸಿದ್ದೇನೆ. ಆ ನಿಯಮಾವಳಿಗಳನ್ನು ರೂಪಿಸಿ ಇದು ಲಾಟರಿಯ ಮೂಲಕವಾಗಲೀ, ಟಾಸ್ಕ್ ಫೋರ್ಸ್ ಕಮಿಟಿಯ ಮೂಲಕವಾಗಲೀ ಆಯ್ಕೆ ಮಾಡುವುದು ಸರಿಯಲ್ಲ ಅದು ಕಾನೂನಿಗೆ ವಿರೋಧವಾಗುತ್ತದೆ. ಗ್ರಾಮಸಭೆಗಳಲ್ಲಿ ಫಲಾನುಭವಿಗಳನ್ನು ಗುರುತಿಸಬೇಕೆಂಬ ತೀರ್ಮಾನವಾದ ಮೇಲೆ ಗ್ರಾಮಸಭೆಯಲ್ಲಿಯೇ ಆಯ್ಕೆ ಮಾಡುವುದೆಂದು ಇವ್ರೊತ್ತು ಮಾಡುತ್ತಾ ಇರತಕ್ಕಂಥ ಕಾರ್ಯ. ಅದರಲ್ಲಿ ತಾವು ಹೇಳುತ್ತಿರುವುದು ಅವರು ಶಾಸಕರುಗಳನ್ನು ಕೇಳುವುದೇ ಇಲ್ಲ, ಗ್ರಾಮಸಭೆಗಳಲ್ಲಿ ಅವರೇ ಮಾಡಿಕೊಂಡು ಬರುತ್ತಾರೆ, ಗ್ರಾಮಸಭೆಗಳನ್ನು ನಡೆಸದೇ ಪಟ್ಟಿಯನ್ನು ಸಿದ್ಧಮಾಡಿ-

ಕೊಳ್ಳುತ್ತಾರೆ. ಇಲ್ಲಿ ಕಚೇರಿಯಲ್ಲಿಯೇ ಕುಳಿತು ಅವರು ಪಟ್ಟಿಗಳನ್ನು ಮಾಡಿಕೊಂಡು ಇಷ್ಟಾಗಿದೆ, ಅಷ್ಟಾಗಿದೆ, ಅವರುಗಳಿಗೆ ಬೇಕಾದವರಿಗೆ ಕೊಟ್ಟಿದ್ದಾರೆ ಎಂಬ ದೂರುಗಳನ್ನು ನಮ್ಮ ಭಾಗದ ಶಾಸಕರೂ ಸೇರಿದಂತೆ ಎಲ್ಲಾ ಭಾಗದ ಶಾಸಕರು ನೀಡುತ್ತಿದ್ದಾರೆ. ಇದು ಸತ್ಯ ಸಂಗತಿಯಾಗಿದ್ದು ಈ ಸಮಸ್ಯೆಯು ಎಲ್ಲಾ ಕಡೆಗಳಲ್ಲಿದೆ. ಈ ಗೊಂದಲ ಇದ್ದೇ ಇದೆ. ನಮ್ಮ ಜನತಾದಳದ ಶಾಸಕಾಂಗ ಪಕ್ಷದ ಸಭೆಯಲ್ಲಿಯೂ ಕೂಡ ಮಾನ್ಯ ಮುಖ್ಯಮಂತ್ರಿಗಳಲ್ಲಿ ಅನೇಕರು ಮನವಿ ಮಾಡಿದ್ದಾರೆ. ಆಶ್ರಯ ಯೋಜನೆಯಡಿಯಲ್ಲಿ ಶಾಸಕರಿಗೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಂಡಾಗ ಆ ಸಂದರ್ಭದಲ್ಲಿ ಮಾನ್ಯ ಸಚಿವರಾದ ಶ್ರೀ ಪ್ರಕಾಶ್‌ರವರು ಮಧ್ಯಪ್ರವೇಶಿಸಿ ಮಾತನಾಡಿದ್ದಾರೆ. ಇದು ನಾವೇ ತಂದಿರತಕ್ಕಂಥ ಆಡಳಿತ ವಿಕೇಂದ್ರೀಕರಣ ದೃಷ್ಟಿಯಿಂದಾಗಿರತಕ್ಕಂಥ ಒಂದು ವ್ಯವಸ್ಥೆಯಲ್ಲಿ ನಾವೇ ಶಾಸಕರು ಫಲಾನುಭವಿಗಳನ್ನು ಗುರುತಿಸುವುದು ಎಂದಾಗ ಫಲಾನುಭವಿಗಳಲ್ಲಿ ಬಹಳ ವ್ಯತ್ಯಾಸವಾಗುತ್ತದೆ, ಆದುದರಿಂದ ನಾವು ಕೆಳಹಂತದಲ್ಲಿಯೇ ಗುರುತಿಸಬೇಕು, ಗ್ರಾಮಸಭೆಗಳಲ್ಲಿಯೇ ಗುರುತಿಸಬೇಕು ಎಂಬ ರೀತಿಯಲ್ಲಿ ನಮ್ಮ ಕಾನ್ಸ್ಟಿಟ್ಯೂಶನ್ ಅಮೆಂಡ್‌ಮೆಂಟ್ 73ನೇ ತಿದ್ದುಪಡಿ ಪ್ರಕಾರ ಆಗಬೇಕೆಂದಿರುವುದರಿಂದ ಅದರ ಅಡಿಯಲ್ಲಿ ಇದು ಬರಬೇಕಾಗುತ್ತದೆಂದು ಹೇಳಿ ಅದಕ್ಕೇ ಒಂದು ಜಿ.ಓ.ವನ್ನು ಸಿದ್ಧಮಾಡಿ ಇವೊತ್ತು ಫಲಾನುಭವಿಗಳನ್ನು ಗುರುತಿಸುವಂಥ ಕಾರ್ಯವಾಗಿದೆ. ಅದರಲ್ಲಿ ಸಾಕಷ್ಟು ತಪ್ಪು ಇದೆ ಎಂದು ಮಾನ್ಯ ಸದಸ್ಯರಾದ ಶ್ರೀ ರಮಾನಾಥ ರೈರವರು ತಿಳಿಸಿದ್ದಾರೆ. ಗ್ರಾಮಸಭೆಯು ಗುರುತಿಸಿರುವುದರಲಿ ಏನಾದರೂ ಮಾಹಿತಿಗಳು ತಪ್ಪು ಇದೆ ಎಂದು ಕಂಡುಬಂದಾಗ ಅದನ್ನು ಸರಿಪಡಿಸುವಂಥ ಕಾರ್ಯವನ್ನು ಎಕ್ಸಿಕ್ಯುಟೀವ್ ಆಫೀಸರ್‌ಗೆ ವಹಿಸಿಕೊಟ್ಟಿದ್ದೇವೆ.

**ಶ್ರೀ ಡಿ.ಕೆ. ಶಿವಕುಮಾರ್:-** ಮಾನ್ಯ ಅಧ್ಯಕ್ಷರೇ. . .

**ಅಧ್ಯಕ್ಷರು:-** ಶಿವಕುಮಾರ್‌ರವರೇ, ಇದು ಗಮನಸೆಳೆಯುವ ಸೂಚನೆ. ನೀವು ಸಿಗ್ನೇಟರಿಯಲ್ಲ. ಹೀಗೆ ಮಾಡಿದರೆ ಹೇಗೆ? ನೀವು ಇನ್ನು ಮುಂದಕ್ಕೆ ಬಹಳ ದೊಡ್ಡ ಜವಾಬ್ದಾರಿಯನ್ನು ಹೊರಬೇಕಾದವರು.

**ಶ್ರೀ ಬಿ.ಎನ್. ಬಚ್ಚೇಗೌಡ:-** ಫಲಾನುಭವಿಗಳನ್ನು ಗುರುತಿಸುವಲ್ಲಿ ಅನುಸರಿಸಬಹುದಾದ ಅಳತೆಗೋಲು ಏನು ಎಂಬ ಪ್ರಶ್ನೆ ಬರುತ್ತದೆ. ಈಗಾಗಲೇ ಫಲಾನುಭವಿಗಳು 11,800 ರೂಪಾಯಿಗಳ ವರಮಾನಕ್ಕಿಂತ ಕೆಳಗೆ ಇರತಕ್ಕಂಥವರು, ಅವರು ಸ್ಥಳೀಯ ನಿವಾಸಿಯಾಗಿರಬೇಕು ಮುಂತಾಗಿ ಕೆಲವು ನಿಯಮಗಳಿವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿಶೇಷವಾಗಿ ಅಂಥ ಅಕ್ರಮಗಳೇನಾದರೂ ಕಂಡುಬಂದಿದ್ದರೆ ಅದಕ್ಕೆ ಪ್ರತ್ಯೇಕ ತನಿಖೆ ವ್ಯವಸ್ಥೆಯನ್ನು ಮಾಡಿ ತಾವು ಯಾವ ರೀತಿಯಲ್ಲಿ ಮಾಹಿತಿಗಳನ್ನು ಒದಗಿಸುತ್ತೀರೋ ಅದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ. ಜೊತೆಯಲ್ಲಿ ನೆರಳು ಭಾಗ್ಯ ಯೋಜನೆಯಲ್ಲಿ ಒಟ್ಟು ರಾಜ್ಯದ 66 ತಾಲ್ಲೂಕುಗಳನ್ನು ಆಯ್ಕೆ ಮಾಡಿರುತ್ತದೆ. ಫಲಾನುಭವಿಗಳಿಗೆ ಮೂರು ಸಾವಿರ ರೂಪಾಯಿಗಳನ್ನು ಕೊಟ್ಟು ಮಳೆ ಬೀಳುವ ಪ್ರದೇಶಗಳಲ್ಲಿ ಹೆಂಚು ಏನಾದರೂ ಹೋಗಿದ್ದರೆ ಶೀಟ್‌ಗಳು ಹೋಗಿದ್ದರೆ ಹಾಕಿಕೊಳ್ಳಲು ಹಣವನ್ನು ಒದಗಿಸುವಂಥಾದ್ದು ಆಗಿದೆ. ಅದನ್ನು ಸ್ವಲ್ಪ ಜಾಸ್ತಿ

ಮಾಡಿ 5000 ರೂಪಾಯಿಗಳವರೆಗೆ ಕೊಡಬೇಕೆಂಬ ವಿಚಾರ ಇದೆ. ಆದರೆ ಫಲಾನುಭವಿಗಳ ಪಟ್ಟಿ ಮಾಡುವ ವಿಚಾರದಲ್ಲಿ ತೊಂದರೆ ಇರತಕ್ಕಂಥಾದ್ದು ಇದೆ. ಅಲ್ಲಿರತಕ್ಕಂಥ ತಾಲ್ಲೂಕು ಪಂಚಾಯತಿ, ಜಿಲ್ಲಾ ಪಂಚಾಯತಿಯವರು ಮಾಡಿಕೊಡುತ್ತಾರೆಯಾದುದರಿಂದ ನಮ್ಮ ಶಾಸಕರನ್ನು ಯಾರೂ ಕೇಳುವುದಿಲ್ಲ, ನಾವೇನು ಮಾಡಬೇಕು; ಆಶ್ರಯ ಯೋಜನೆಯಡಿಯಲ್ಲಿ ನಾವು ಆಯ್ಕೆ ಪಟ್ಟಿಯನ್ನು ಕೊಟ್ಟರೆ ಅದನ್ನು ಗುರುತಿಸಬೇಕೆಂದು ಶಾಸಕರು ಕೇಳುತ್ತಿದ್ದಾರೆ. ಆದುದರಿಂದ ವ್ಯವಸ್ಥೆಯಲ್ಲಿ ಏನಾದರೂ ಲೋಪದೋಷಗಳು ಇದ್ದರೆ ಅವುಗಳನ್ನು ಸರಿಪಡಿಸುವಂಥಾದ್ದು ಆಗಬೇಕಾಗಿದೆ. ನಮ್ಮ ಈ.ಓ.-ಗಳಿಗೆ ತಿಳಿಸಿ ಆ ಕಾರ್ಯವನ್ನು ಮಾಡುತ್ತೇವೆ.

**ಶ್ರೀ ಬಿ. ರಮಾನಾಥ ರೈ:-** ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸಚಿವರು ಹೇಳಿದಂಥ ವಿಚಾರಗಳ ಬಗ್ಗೆ ನನ್ನ ಆಕ್ಷೇಪಗಳಿಲ್ಲ. ನನ್ನ ಮೂಲಭೂತವಾದ ಪ್ರಶ್ನೆ ಇದಾಗಿದೆ. ತಾವು ಏನು ಹೇಳಿದ್ದೀರಿ ಅಂದರೆ ಆಶ್ರಯ ಮನೆಗಳನ್ನು ಕೊಡುವ ಪಟ್ಟಿಯು ಗ್ರಾಮಸಭೆಗಳಲ್ಲಿ ತೀರ್ಮಾನವಾಗಬೇಕೆಂದು ಹೇಳಿದ್ದೀರಿ. ಇದರಿಂದ ಶಾಸಕರಿಗೆ ಯಾವುದೇ ಅವಕಾಶವಿಲ್ಲ. ಆ ಬಗ್ಗೆ ನಾನು ಮಾತನಾಡಲಿಲ್ಲ. ಸರಕಾರದ ಮಾರ್ಗಸೂಚಿಗಳ ಪ್ರಕಾರ ಗ್ರಾಮಪಂಚಾಯತಿಯಲ್ಲಿ ಫಲಾನುಭವಿಗಳ ಆಯ್ಕೆ ಮಾಡಿ ಆ ಪಟ್ಟಿಯು ತಾಲ್ಲೂಕು ಪಂಚಾಯತಿಗೆ ಹೋಗಿದ್ದಾಗ ಗ್ರಾಮ ಸಭೆಯ ಪಟ್ಟಿಯನ್ನು ಕಸದ ಬುಟ್ಟಿಗೆ ಹಾಕಿ ಅವರೇ ಒಂದು ಹೊಸ ಪಟ್ಟಿಯನ್ನು ಮಾಡುತ್ತಾರೆ. ಇದರ ಬಗ್ಗೆ ಏನು ಹೇಳುತ್ತೀರಿ? ಸರಕಾರದ ಮಾರ್ಗಸೂಚಿಗಳನ್ನು ಸಂಪೂರ್ಣ ನಿರ್ಲಕ್ಷ್ಯ ಮಾಡಿದ್ದಾರೆ. ಮಂಗಳೂರು ತಾಲ್ಲೂಕಿನಲ್ಲಿ ಈ ತರಹ ಆಗಿದೆ. ಇದು ಕಾರ್ಯನಿರ್ವಾಹಕ ಅಧಿಕಾರಿಯ ಕುಮ್ಮಕ್ಕಿನ ಮೇಲೆ ಆಗುತ್ತಾ ಇದೆ. ನಾನು ಕೇಳಿದಾಗ ಆಶ್ರಯ ಮನೆಗಳನ್ನು ಇಂತಿಷ್ಟು ಜನರಿಗೆ ಹಂಚಿದ್ದೇವೆಂದು ಹೇಳುತ್ತಾರೆ. ಸದಸ್ಯರಿಗೆ ಹತ್ತು ಮನೆಗಳ ಪ್ರಕಾರ ಹಂಚಿದ್ದೇನೆಂದು ಹೇಳುತ್ತಾರೆ. ಹೀಗೆ ಹಂಚಲು ಅದೇನು ಬಿಸ್ಕತ್ ಆಗಿದೆಯೇ? ಯಾರಿಗೆ ಮನೆಗಳನ್ನು ನಿಜವಾಗಿ ಕೊಡಬೇಕೋ ಅವರಿಗೆ ಕೊಡಲಿ. ಆದರೆ ಅದು ನೀತಿ ಬಾಹಿರವಾಗಿ ಆಗಬಾರದು. ಸದಸ್ಯರಿಗೆ ಹತ್ತು ಮನೆಗಳನ್ನು ಹಂಚಿದ್ದೇನೆಂದು ಹೇಳುವುದೂ ಕೂಡ ಉಡಾಫೆಯ ಮಾತು. ಆ ತರಹ ಆಗಬಾರದು. ಸರಕಾರದ ಮಾರ್ಗಸೂಚಿ ಏನಿದೆ, ಅದರ ಪ್ರಕಾರ ಪಟ್ಟಿಯು ಗ್ರಾಮಸಭೆಗಳಲ್ಲಿ ಆಗುವುದಕ್ಕೆ ನಮ್ಮ ಅಭ್ಯಂತರವಿಲ್ಲ. ಆಶ್ರಯ ಸಮಿತಿಗೆ ಕೆಲವು ಶಾಸಕರ ಅಧ್ಯಕ್ಷತೆಯಲ್ಲಿ ನೇಮಿಸಬೇಕೆಂಬ ಒಂದು ಬೇಡಿಕೆಯೂ ಇದೆ. ಗ್ರಾಮಸಭೆಯವರು ಮಾಡಿದ ಪಟ್ಟಿಯನ್ನು ತಾಲ್ಲೂಕು ಪಂಚಾಯತ್‌ನವರು ನಿರ್ಲಕ್ಷ್ಯ ಮಾಡುತ್ತಿರುವ ಬಗ್ಗೆ ತಾವುಗಳು ಉತ್ತರ ಕೊಡಬೇಕು.

**ಶ್ರೀ ಬಿ.ಎನ್. ಬಚ್ಚೇಗೌಡ:-** ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರುಗಳು ಹೇಳುವ ಹಾಗೆ ಇಂಥ ಪ್ರಕರಣಗಳು ಆಗಿವೆ. ಆಗಿಲ್ಲವೆಂದು ನಾನು ಹೇಳುವುದಿಲ್ಲ. ಇಂಥ ಭಿನ್ನಾಭಿಪ್ರಾಯ, ಘರ್ಷಣೆ, ಅಲ್ಲಿರತಕ್ಕಂಥ ಪಂಚಾಯತಿ ಸದಸ್ಯರಿಗೂ, ಶಾಸಕರಿಗೂ ಬಂದ ಅಭಿಪ್ರಾಯ ವ್ಯತ್ಯಾಸ ಮುಂತಾಗಿ ರಾಜಕಾರಣವಾಗಿ ಇವೆಲ್ಲವೂ ಇರುತ್ತವೆ. ಆದರೆ ಯೋಜನೆಯ ನಿಯಮಾವಳಿಗಳ ಪ್ರಕಾರ ಅನುಷ್ಠಾನಗೊಳಿಸುವಂಥ ಕಾರ್ಯವನ್ನು ಮಾಡಬೇಕು. ಅದನ್ನು ಮಾಡುತ್ತೇವೆ.

**ಶ್ರೀ ಬಿ. ರಮಾನಾಥ ರೈ:-** ಮಾನ್ಯ ಅಧ್ಯಕ್ಷರೇ, ತಮ್ಮ ಗಮನಕ್ಕೆ ತರುತ್ತೇನೆ. ರಾಜಕಾರಣದ ವಿಚಾರ ಬೇರೆ. ನಾನು ಹೇಳುವಲ್ಲಿ ಕಾಂಗ್ರೆಸ್ ಮತ್ತು ಜನತಾದಳ ಸೇರಿ ತಾಲ್ಲೂಕು ಪಂಚಾಯತಿ ಇರುವುದು. ನಾನು ರಾಜಕೀಯದ ಬಗ್ಗೆ ಮಾತನಾಡುತ್ತಾ ಇಲ್ಲ. ಆಲ್ಲಿಯ ನೀತಿಯ ಬಗ್ಗೆ ನಾನು ಮಾತನಾಡುತ್ತಾ ಇದ್ದೇನೆ. ಸರಕಾರಿ ಮಾರ್ಗಸೂಚಿಯ ಪ್ರಕಾರ ಅನುಷ್ಟಾನ ಮಾಡಲು ಸಂಬಂಧಪಟ್ಟ ಅಧಿಕಾರಿಯು ನಿರ್ಲಕ್ಷ್ಯ ಮಾಡುತ್ತಾನೆ ಅಂದರೆ ಅವನ ಮೇಲೆ ಕ್ರಮ ಜರುಗಿಸುತ್ತೀರಾ ಎಂಬ ಮಾತನ್ನು ಕೇಳುತ್ತಿದ್ದೇನೆ. ಒಬ್ಬ ಶಾಸಕರಿಗೆ ಅಪಮಾನ ಮಾಡತಕ್ಕಂಥ ರೀತಿಯಲ್ಲಿ ಅವರು ವರ್ತಿಸುತ್ತಾ ಇದ್ದಾರೆ. ನಾವು ಕೇಳಿದ ಪ್ರಶ್ನೆಗಳಿಗೆ ಉಡಾಫೆಯ ಉತ್ತರವನ್ನು ಕೊಡುತ್ತಾರೆ. ನಿಗದಿತ ಮಾರ್ಗಸೂಚಿಯ ಪ್ರಕಾರ ಮಾಡಿದರೆ ನಮ್ಮ ಆತಂಕವಿಲ್ಲ. ಆ ಅಧಿಕಾರಿಯ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು.

**ಶ್ರೀ ಬಿ.ಎನ್. ಬಚ್ಚೇಗೌಡ:-** ಮಾನ್ಯ ಸದಸ್ಯರು ತಿಳಿಸಿರುವ ಹಾಗೆ ನಿಗದಿತ ನಿಯಮಾವಳಿಗಳ ಪ್ರಕಾರ ಚಾಚೂ ತಪ್ಪದೇ ಆ ಕೆಲಸ ಮಾಡುವಂತೆ ಸಂಬಂಧಪಟ್ಟವರಿಗೆ ಆದೇಶವನ್ನು ಕೊಡುತ್ತೇವೆ.

**ಶ್ರೀ ರಮಾನಾಥ ರೈ:-** ಸನ್ಮಾನ್ಯ ಸಭಾಧ್ಯಕ್ಷರೇ, ತಮ್ಮ ಬಗ್ಗೆ ಅಪಾರವಾದ ಗೌರವ ನಮಗಿದೆ. ಈ ವಿಚಾರದಲ್ಲಿ ನಾನು ಬಹಳ ನೋವು ಪಟ್ಟಿದ್ದೇನೆ. ತಾವುಗಳು ನನ್ನ ರಕ್ಷಣೆಗೆ ಬರಬೇಕು.

**ಅಧ್ಯಕ್ಷರು:-** ನೀವು ನೋವು ಪಡಬೇಕಾದುದ್ದಿಲ್ಲ. ನಿಯಮಾವಳಿಗಳ ಪ್ರಕಾರ ಚಾಚೂ ತಪ್ಪದ ಹಾಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಅವರು ಹೇಳಿದ್ದಾರೆ.

**ಶ್ರೀ ಸಿ.ಆರ್. ಸಗೀರ್ ಅಹಮದ್:-** ಮಾನ್ಯ ಅಧ್ಯಕ್ಷರೇ, ತಮ್ಮ ಬಗ್ಗೆ ಅಪಾರವಾದಂಥ ಗೌರವವನ್ನು ಇಟ್ಟುಕೊಂಡಿರುವವರಲ್ಲಿ ರೈ ಅವರು ಎರಡನೆಯವರು. ಮಾನ್ಯ ವಾಟಾಳ್ ನಾಗರಾಜ್ ರವರು ಮೊದಲನೆಯವರು.

**ಅಧ್ಯಕ್ಷರು:-** ನೀವು ಎಲ್ಲಾ ಲೆಕ್ಕವನ್ನು ಇಟ್ಟಿದ್ದೀರಿ.

**ಶ್ರೀ ಬಿ. ರಮಾನಾಥ ರೈ:-** ನಮಗೆ ಮಾನ್ಯ ಅಧ್ಯಕ್ಷರು ಮೊದಲಿಂದಲೂ ಪರಿಚಿತರು. ಶಾಸಕರಾಗುವುದಕ್ಕಿಂತ ಮೊದಲು ಕೂಡ ಪರಿಚಿತರು. ಅವರ ಕೋಲಾರ ನಮ್ಮ ದಕ್ಷಿಣ ಕನ್ನಡ ಬೇರೆ ಬೇರೆ ಕಡೆಗಳಲ್ಲಿದ್ದರೂ ನಾವು ಮೊದಲಿನಿಂದಲೂ ಪರಿಚಿತರು.

**ಅಧ್ಯಕ್ಷರು:-** ತಮಗೆ ತುಂಬಾ ಧನ್ಯವಾದಗಳು. ಈಗ ಸನ್ಮಾನ್ಯ ಸಭಾನಾಯಕರು ಬೇಡಿಕೆಗಳ ಮೇಲೆ ಉತ್ತರವನ್ನು ಪ್ರಾರಂಭಿಸಬೇಕು.